# ಕೇರಳದ 'ಚಕ್ಕವಂಡಿ'



■ ಚಿತ್ರ–ಬರಹ:
**ನಾ. ಕಾರಂತ ಪೆರಾಜೆ**



ಕೇರಳ ಮುಖ್ಯಮಂತ್ರಿ, ಹಣಕಾಸು ಮತ್ತು ಕೃಷಿ ಸಚಿವರಿಂದ ಚಕ್ಕವಂಡಿಗೆ ಶುಭಚಾಲನೆ

**ಚ**ಕ್ಕವಂಡಿ ಹಲಸಿನ ಉತ್ಪನ್ನಗಳ ಪ್ರಚಾರ ಮತ್ತು ಮಾರಾಟದ ವಾಹನ. ಮಲೆಯಾಳದಲ್ಲಿ ಚಕ್ಕವಂಡಿ (ಹಲಸಿನ ಗಾಡಿ). ಕೇರಳದ ತಿರುವನಂತಪುರದಲ್ಲಿ ಈಚೆಗೆ ಚಾಲನೆಗೊಂಡಿದೆ. ಚಕ್ಕವಂಡಿಯಲ್ಲಿ ಏನೇನಿದೆ? ಐಸ್‌ಕ್ರೀಂ, ಕಸಿಗಿಡಗಳು, ಮನೆ ಉತ್ಪನ್ನಗಳು, ಅಂದಂದೇ ತಯಾರಿಸಿದ ಹಲಸಿನ ಉತ್ಪನ್ನಗಳು, ಸ್ಥಳದಲ್ಲೇ ಸಿದ್ಧಪಡಿಸುವ ತಿಂಡಿಗಳು.!

ಇದು ವ್ಯಾಪಾರ ವ್ಯವಸ್ಥೆಯಲ್ಲ, ಶಿಕ್ಷಣ ವ್ಯವಸ್ಥೆಯಾಗಿ ರೂಪುಗೊಳ್ಳಬೇಕು ಎನ್ನುವುದು ಪಾಲಕ್ಕಾಡನ ಉದ್ಯಮಿ ಮೃದುವರ್ಣನ್ ಅವರ ಆಶಯ. ಮೇಳದ ಉತ್ತೇಜನದಿಂದ ಒಮ್ಮೆ ಚಕ್ಕವಂಡಿ ಓಡಿತ್ತು. ಉತ್ಪನ್ನಗಳ ಕೊರತೆಯಿಂದ ಮುಂದುವರಿಯಲಿಲ್ಲ. ಈಗ ವ್ಯವಸ್ಥಿತ ಅಡಗಟ್ಟಿನಿಂದ ಕೇರಳದ ರಸ್ತೆಗಳಲ್ಲಿ ಗಾಡಿ ಓಡುತ್ತಿದೆ. ಉತ್ತಮ ಸ್ವೀಕೃತಿ. ಹಲಸಿನ ಉತ್ಪನ್ನಗಳಿಗೆ ಧಾರಾಳ ಕೊಳ್ಳುಗರು.

ಈಗಿನ ಬೇಡಿಕೆ ನೋಡಿದರೆ ಪ್ರತಿ ಜಿಲ್ಲೆಗಳಲ್ಲೂ ಚಕ್ಕವಂಡಿ ಗೆಲ್ಲಬಹುದು. ಏನಿಲ್ಲವೆಂದರೂ ವರುಷದಲ್ಲಿ ಮುನ್ನೂರು ದಿನ ಉತ್ಪನ್ನ ಸಿಕ್ಕರೂ ಓಕೆ. ಆದರೆ ಅಷ್ಟು ಪ್ರಮಾಣದ ಉತ್ಪನ್ನಗಳು ತಯಾರಾಗುತ್ತಾ ಇಲ್ಲ. ಐದಾರು ತಿಂಗಳ ಕಾಲ ಹಲಸಿನ ಗುಜ್ಜೆ, ಸೊಳೆ, ಬೀಜಗಳನ್ನು ಫ್ರೀಜರಿನಲ್ಲಿಟ್ಟು ಅಕಾಲದಲ್ಲಿ ಬಳಸುವ ವ್ಯವಸ್ಥೆ ಹೊಂದಿಸಿಕೊಂಡರೆ ಈ ಸಮಸ್ಯೆ ಪರಿಹಾರವಾಗಬಹುದು.

ಮೃದುವರ್ಣನ್ ಅವರ ಚಿಕ್ಕೂಸ್ ಐಸ್‌ಕ್ರೀಂ ಉದ್ದಿಮೆ ಪಾಲಕ್ಕಾಡಿನಲ್ಲಿ ಖ್ಯಾತಿ. ವರುಷದ ಹಿಂದೆ ಸ್ನೇಹಿತರೊಂದಿಗೆ ಮಹಾರಾಷ್ಟ್ರದ ಕುಡಾಲಿಗೆ ಭೇಟಿ ನೀಡಿದ ಫಲವಾಗಿ ಹಲಸಿನ ಹಣ್ಣಿನ ಪಲ್ಪ್ ಮಾಡುವ ತರಬೇತಿ ಪಡೆದರು. ಬರುವಾಗ ಪಲ್ಪ್ ಅನ್ನೂ ತಂದಿದ್ದರು. ಹಲಸಿನ ಹಣ್ಣಿನ ಐಸ್‌ಕ್ರೀಂ ಮಾಡಿದರು. ಯಾಕೋ, ಹಳ್ಳಿಯಲ್ಲಿ ಐಸ್ ಕ್ರೀಮಿಗೆ ಹೇಳುವಂತಹ ಸ್ಪಂದನ ಸಿಗಲಿಲ್ಲ. ಆದರೆ ಪೇಟೆ ಮಂದಿ ಇಷ್ಟ ಪಟ್ಟರು.

ಐಸ್‌ಕ್ರೀಮ್ ಕ್ಲಿಕ್ ಆಯಿತು. ಸವಿದವರು ಬೆನ್ನು ತಟ್ಟಿದರು. ಉತ್ಪನ್ನವಿದ್ದೆಡೆಗೆ ಜನರು ಬರುವುದಕ್ಕಿಂತ ಜನರಿದ್ದೆಡೆಗೆ ಹಲಸಿನ ಉತ್ಪನ್ನ ಒಯ್ದರೆ? ಎಂದು ಮೃದುವರ್ಣನ್ ಯೋಚಿಸಿದರು. ಎರಡು ವರುಷಗಳ ಪೂರ್ವಸಿದ್ಧತೆಯೊಂದಿಗೆ ಯೋಜನೆ ಕಾರ್ಯಗತವಾಯಿತು.

ಮೃದುವರ್ಣನ್ ಈಗ ಖುಷ್ ಆಗಿದ್ದಾರೆ. ಈಗ ರೂಪಿಸಿದ ವಂಡಿ (ಗಾಡಿ) ಚಿಕ್ಕದಾಯಿತು ಎಂದು ಅರ್ಥವಾಗುತ್ತಿದೆ. ದೊಡ್ಡ ಬಂಡಿ ಕೊಳ್ಳುವ ನಿರ್ಧಾರ ಮಾಡಿದ್ದೇನೆ. ಕೇರಳದಲ್ಲಿ ಹಲಸಿನ ಬಳಕೆ ಪಾರಂಪರಿಕ. ಬದಲಾದ ಕಾಲಘಟ್ಟದಲ್ಲಿ ಜನರ ಟೇಸ್ಟಿನಂತೆ ಉತ್ಪನ್ನಗಳನ್ನು ಸಿದ್ಧಪಡಿಸುವ ಸವಾಲಿದೆ.

ಜನ ವಿಜ್ಞಾನವನ್ನು ಪ್ರಚಾರ ಮಾಡುತ್ತಿರುವ ಸಂಸ್ಥೆ ಸಿಸ್ಸಾ (ಅISSo) ನೇತೃತ್ವದ ಗಾಡಿ ಕಲ್ಪನೆಯು ಭಾರತದಲ್ಲೇ ಪ್ರಥಮ. ಕೇರಳದಲ್ಲಿ ಭೂಮಿತಾ ಸಂಸ್ಥೆಯು ಜಾಕ್‌ಅಪ್ ಬ್ರಾಂಡಿನಲ್ಲಿ ಹಲಸಿನ ಉತ್ಪನ್ನಗಳನ್ನು ಗ್ರಾಹಕರಿಗೆ ನೀಡುತ್ತಿದೆ. ●